**ಮೋಟಾರು ವಾಹನ ಅಪಘಾತಗಳ ಪರಿಹಾರ ಮಂಡಳಿ, ಬೆಂಗಳೂರು,**

**1ನೇ ಲಘು ವ್ಯವಹಾರಗಳ ನ್ಯಾಯಾಲಯ ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ ಬೆಂಗಳೂರು**

**ಎಂ.ವಿ.ಸಿ.ಃ 7174/2024**

ಆರ್.ಡಬ್ಲೂ **2**

| | | |
|---|---|---|
| **ಸಾಕ್ಷಿದಾರರ ಹೆಸರು** | **ಃ** | ಸಂತೋಷ್ ಜಿ. |
| **ತಂದೆಯ ಹೆಸರು** | **ಃ** | ಗಣೇಶ್ ಬಹದ್ದೂರ್ |
| **ವಯಸ್ಸು** | **ಃ** | **43** ವರ್ಷ |
| **ಉದ್ಯೋಗ** | **ಃ** | ಅಧೀಕ್ಷಕರು, ಪ್ರಾದೇಶಿಕ ಸಾರಿಗೆ ಕಛೇರಿ, ರಾಮನಗರ |
| **ವಾಸ ಸ್ಥಳ** | **ಃ** | ರಾಮನಗರ |

**ದಿನಾಂಕಃ 15.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ 2ನೇ ಎದುರುದಾರರ ಪರ ಮಾನ್ಯ ವಕೀಲರಿಂದ.**

ನ್ಯಾಯಾಲಯದಿಂದ ಸಮನು ಬಂದ ಕಾರಣ ನಾನು ಈ ದಿನ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಮತ್ತು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೇನೆ.

ನಾನು ಸುಮಾರು 3 ತಿಂಗಳುಗಳಿಂದ ಮೇಲೆ ತಿಳಿಸಿದ ಸಾರಿಗೆ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಅಧಿಕಾರ ಪತ್ರವನ್ನು **ನಿ.ಆರ್ 2** ಎಂದು, ಬಿ. ಎಕ್ಸ್ ಟ್ರ್ಯಾಕ್ಟ್ ನ ಧೃಡಿಕೃತ ಪ್ರತಿಯನ್ನು **ನಿ.ಆರ್ 3** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ನಿ.ಆರ್ 3 ಅನ್ನು ಗಣಕಯಂತ್ರದಿಂದ ಪ್ರಿಂಟ್ ತೆಗೆದು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಆಪಾದಿತ ಬಸ್ಸಿ ಗೆ ಬೇರೆ ಸಾರಿಗೆ ಕಛೇರಿಯಿಂದ ಪರ್ಮಿಟ್ ಅನ್ನು ನೀಡಿರಬಹುದು ಎಂದರೆ

ಸರಿಯಲ್ಲ. ನಮ್ಮ ಕಛೇರಿಯಿಂದ ಪರ್ಮಿಟ್ ನೀಡಿರುವುದರಿಂದ ಬೇರೆ ಕಛೇರಿಯಿಂದ ಪರ್ಮಿಟ್ ನವೀಕರಿಸಲು ಅಥವಾ ಪಡೆಯಲು ಆಗುವುದಿಲ್ಲ. ಅಪಘಾತವಾದ ದಿನಾಂಕದಂದು ಆಪಾದಿತ ವಾಹನಕ್ಕೆ ಪರ್ಮಿಟ್ ಇದ್ದರೂ ಸಹ ಅದಕ್ಕೆ ಸಂಬಂಧಪಟ್ಟ ದಾಖಲಾತಿಯನ್ನು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೂಲ ಪರ್ಮಿಟ್ ವಾಹನದ ಮಾಲೀಕರ ಬಳಿ ಇರುತ್ತದೆ ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ನಾನು ಅರ್ಹ ವ್ಯಕ್ತಿ ಅಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿ ಅಪಘಾತಕ್ಕೂ ಪೂರ್ವದ ದಾಖಲಾತಿ ಆಗಿರುತ್ತದೆ ಎಂದರೆ ಸರಿ. ಅಪಘಾತವಾದ ದಿನಾಂಕದಂದು ಆಪಾದಿತ ವಾಹನಕ್ಕೆ ಪರ್ಮಿಟ್ ಇತ್ತು ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**